ಮನೋಗತವನ್ನರಿತು ಮನೆವಾರ್ತೆ ನಡೆಸುವವಳಾದರೆ ಸುಖಕ್ಕೆ ಕಲಶವಿಟ್ಟಂತೆ ಎಂದು ಗಂಡಸು ಭಾವಿಸುತ್ತಾನೇನೋ, ಬಹುಶಃ. ಆದರೆ ಈ ಎರಡೂ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸುವವಳ ಗತಿ ಏನಾಗುತ್ತದೆಯೆಂಬುದರ ಕಡೆ ಅವನ ಚಿತ್ತ ಹರಿಯುತ್ತದೆಯೇ? ತಾನೂ ಮನೆಯಲ್ಲಿರುವವಳಾಗಿದ್ದರೆ ಬೆಳಿಬೆಳಿಗ್ಗೆ ಬೇಗನೆದ್ದು ಅಂಗಳ, ಬಾಗಿಲು ಗುಡಿಸಿ ಚುಕ್ಕೆ ರಂಗೋಲಿಯಿಟ್ಟು, ತಲೆಗೆ ನೀರೆರೆದುಕೊಂಡು ಟವೆಲ್ಲು ಸುತ್ತಿ, ತುಳಸಿಗೆ ಹೂವಿಟ್ಟು ಕಟ್ಟೆಗೆ ಸುತ್ತು ಬಂದು, 'ರೀ, ಏಳಲ್ವೇನ್ರೀ?' ಎನ್ನುತ್ತಾ ಕೈಯಲ್ಲಿ ಬಿಸಿಕಾಫಿಯ ಕಪ್ಪು ಹಿಡಿದು ಗಂಡನನ್ನೆಬ್ಬಿಸಿದರೆ ಕಣ್ಣುಜ್ಜಿಕೊಂಡು ಏಳುವವನ ದೃಷ್ಟಿಗೆ ಬೀಳುವ, ಮುಂಜಾನೆಯ ಮಂಜಿನಲ್ಲಿ ಅರಳಿ ನಿಂತಂತಾ ಶುಭ್ರಸ್ನಾತ ಮನದನ್ನೆಯನ್ನು ಕಂಡು ಅವನ ಕಣ್ಣಲ್ಲಿ ಮಿನುಗುವ ಮೆಚ್ಚುಗೆಗೆ ಸಾಟಿಯೆಂಬುದಿದೆಯೇ? 'ಸದ್‌ಗೃಹಿಣಿ ಅಂದರೆ ಹೀಗೇ...' ಎಂದು ಸಿನಿಮಾಗಳಲ್ಲಿ ತೋರಿಸಿ ತೋರಿಸಿ, ನಂಬಿಸಿ ನಂಬಿಸಿ, ಇರುತ್ತಾರೆ ಇಂತವರೂ. ಮನೆಯೇ ಪ್ರಪಂಚವಾಗಿರುವಂತವರು. ಕೇತಕಿಯ ಥರದವರು. ಗಂಡುಜಾತಿಗೆ ಆದರ್ಶಪ್ರಾಯರಾಗಿ ಕಾಣುವಂತವರು...

ಕೇತಕಿ ಇರುವಷ್ಟು ದಿನ ಇಂತಾದ್ದೇ ಹಳವಂಡಗಳು. ಅಸಮಾಧಾನದ ಭಾವನೆಗಳು. ಅನುದ್ದೇಶಪೂರ್ವಕವಾಗಿ ಶ್ರಾವಂತಿಯ ಮನಃಶಾಂತಿ ಕದಡಿ ಹೋಗುತ್ತಿತ್ತು. ರಾಡಿಯಾಗುತ್ತಿತ್ತು ಮನಸ್ಸೆಂಬ ತಿಳಿಗೊಳ.

★★★

ಬಂದಳು ಕೇತಕಿ, ಕರ್ಣನಿಗಿಂತಾ ಐದು ವರ್ಷ ದೊಡ್ಡವನಾದ ತನ್ನ ಮಗ ಪ್ರಥ್ವಿಯನ್ನು ಹಿಂದಿಟ್ಟುಕೊಂಡು. ರೈಲ್ವೇಸ್ಟೇಷನ್ನಿನಲ್ಲಿ ಕಾದು ನಿಂತು ಕಾರಿನಲ್ಲಿ ಅವಳನ್ನು ಮನೆಗೆ ಕರೆತಂದ ನಕುಲ. ಅಷ್ಟು ಬೆಳಿಬೆಳಿಗ್ಗೆ ನಿದ್ದೆ ಬಿಟ್ಟು ಅವಳನ್ನು ಕರೆತರಲು ಓಡಬೇಕಾಗಿದೆಯೇ? ಆಟೋದಲ್ಲಿ ಬಂದರೆ ಸವೆದು ಹೋಗುತ್ತಾಳಾ? ಅವಳ ಲಗೇಜನ್ನು ರೂಮಿನವರೆಗೆ ಒಯ್ದು ಕೊಟ್ಟು, ಇವನೇನು ಗುಲಾಮ ಕೆಟ್ಟುಹೋದನಾ? ತಾನೇನು, ತನ್ನ ಯೋಗ್ಯತೆಯೇನು ಎನ್ನುವ ಅರಿವು ಕಿಂಚಿತ್ತಾದರೂ ಬೇಡವಾ? ಬಡತನದಲ್ಲಿ ಹುಟ್ಟಿ, ಬಡತನದಲ್ಲಿ ಬೆಳೆದು, ಸಾಧಾರಣದವರ ಮನೆಗೆ ಕಿರಿ ಸೊಸೆಯಾಗಿ ಹೋದವಳಿಗೆ ಮನೆಯ ಸಮಸ್ತ ಆಗುಹೋಗುಗಳ ನಿರ್ವಹಣೆ ಗಂಟು ಬಿದ್ದಿದೆಯಂತೆ. ಹಿರಿಸೊಸೆ ಅನುಕೂಲಸ್ಥರ ಮನೆಯವಳಾದ್ದರಿಂದ ಅವಳನ್ನು ಅಟ್ಟ ಹತ್ತಿಸಿ ಕೂರಿಸಿಕೊಂಡಿದ್ದಾರಂತೆ ಅತ್ತೆ. ವಾರಗಿತ್ತಿಯ ಗಂಡನಿಗೆ ಊರುಮನೆಯ ಮಾಧ್ಯಮಿಕಶಾಲೆಯಲ್ಲಿ ಮೇಷ್ಟ್ರು ಕೆಲಸವೂ ಇದೆಯಂತೆ. ಹೊರಗಿನ ಕೃಷಿ ಕೆಲಸಗಳಲ್ಲಿ ಬೆನ್ನುಕೋಲು ನೆಟ್ಟಗಾಗಿಸಿಕೊಳ್ಳದೆ ದುಡಿಯಲು ಕೇತಕಿಯ ಗಂಡ. ಮನೆಯೊಳಗೆ ಗೆಯ್ಯಲು ಕೇತಕಿ. ಇಷ್ಟಾಗಿಯೂ ತೌರಿಲ್ಲದ ಈ ಸೊಸೆಯನ್ನು ಕಂಡರೆ ಅತ್ತೆಗೆ ಸಸಾರವಂತೆ. ಅಯ್ಯಬ್ಬಾ, ಈ ನಕುಲನ ಸಹವಾಸಕ್ಕೆ ಸಿಕ್ಕಿ ಅವನು ಬಳಸುವ ಪದಗಳು ತನಗೂ ಬಾಯಿಪಾಠ ಎಂದು ಕೆಲವೊಮ್ಮೆ ತಮಾಷೆಯೆನಿಸುತ್ತಿತ್ತು ಕೇತಕಿಗೆ. ಅದ್ಯಾವಾಗ ತನ್ನ ಕಣ್ಣು ತಪ್ಪಿಸಿ ಸೋದರಮಾವ, ಸೊಸೆ ಆಪ್ತಸಮಾಲೋಚನೆ ನಡೆಸುತ್ತಾರೋ ಪರಮಾತ್ಮ ಬಲ್ಲ. ಎಲ್ಲವನ್ನೂ ನಕುಲ ತನ್ನ ಬಳಿ ಹಂಚಿಕೊಳ್ಳುವುದಿಲ್ಲ ಎನ್ನುವ ಅನುಮಾನವಿದೆ ಶ್ರಾವಂತಿಗೆ. ಆಗ, ಈಗ, ಅಷ್ಟು, ಇಷ್ಟು ಇವಳ ಕಿವಿಗೆ ಬೀಳುತ್ತದೆ. ಅಷ್ಟರಲ್ಲೇ ಅಂದಾಜಿಸಿಕೊಂಡಿದ್ದಾಳೆ ಶ್ರಾವಂತಿ, ಈ ಕೇತಕಿ ಗಂಡನ ಮನೆಯಲ್ಲಿ ಹೇಳಿಕೊಳ್ಳುವಷ್ಟು ಸುಖದಲ್ಲೇನಿಲ್ಲ. ಅದಕ್ಕೇ ಇರಬೇಕು, ರಜಾ ಬರುತ್ತಿದ್ದಂತೆ ಹಾರಿ ಬರುತ್ತಾಳೆ ಸೋದರಮಾವನ ಮನೆಗೆ. ಅದು ಹೇಗೆ ಇನ್ನೊಬ್ಬರ ಮನೆಯಲ್ಲಿ ತಿಂಗಳುಗಟ್ಟಲೆ ಕಾಲ ಹಾಕಲು ಮನಸ್ಸು ಒಪ್ಪುತ್ತದೆಯೋ? ತನ್ನಂತವಳಿಗಾದರೆ ಹೀಗಿರಲು ಸಾಧ್ಯವೇ ಇಲ್ಲ.